**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ**
**CC.No.465/2023**
**CW : 01 PW: 04**
**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ** : 21.02.2026

| | |
|---|---|
| ಹೆಸರು | : ಲಕ್ಷ್ಮಿಬಾಯಿ ಚೌಹಾಣ |
| ತಂದೆಯ ಹೆಸರು | : ಖೂಬು ಚೌಹಾಣ |
| ವಯಸ್ಸು | : 32 |
| ಉದ್ಯೋಗ | : ಪ್ರಾಂಶುಪಾಲ |
| ವಾಸಸ್ಥಳ | : ದೇವನತೆಗನೂರು |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಚಾಸಾ-4 ನನ್ನ ಸಹೋದರ, ಚಾಸಾ- 5 ಮತ್ತು 6 ಇವರ ಪರಿಚಯ ನನಗೆ ಇರುತ್ತದೆ. ಆರೋಪಿತರ ಪರಿಚಯ ಸಹ ನನಗೆ ಇರುತ್ತದೆ. ದಿ: 30/07/2023 ರಂದು ಬೆಳಿಗ್ಗೆ 8.45 ರ ಸುಮಾರಿಗೆ ನಾನು ಮನೆಯಲ್ಲಿ ಇರುವಾಗ ಆರೋಪಿ ನಂ.3 ರವರ ಬಂದು ನನಗೆ ಹೊರಗೆ ಬಾ ಇಲ್ಲವಾದಲ್ಲಿ ನಾವೇ ಕೈಯನ್ನು ಹಿಡಿದು ಎಳೆದುಕೊಂಡು ಬರುತ್ತೇವೆ ಎಂದು ಹೇಳಿದ್ದು ಇರುತ್ತದೆ. ನಾನು ಹೊರಗಡೆ ಬಂದು ನನಗೆ ತೊಂದರೆಯನ್ನು ನೀಡಬೇಡಿ ಎಂದು ಹೇಳಿದ್ದು ಇರುತ್ತದೆ.

ನಾನು ಮನೆಯ ಒಳಗೆ ಹೋಗುವಾಗ ಮೂರನೇ ಆರೋಪಿಯು ಮನೆಯ ಮುಂದಿನ ರಸ್ತೆಯ ಮೇಲೆ ತಡೆಹಿಡಿದು ಕೈ ಹಿಡಿದು ತಿರುವಿ ನುಗ್ಗಿಸಿದ್ದು ಇರುತ್ತದೆ. ಆರೋಪಿ ನಂ.1 ಇವರು ಅವಾಚ್ಯ ಶಬ್ದಗಳಿಂದ ಬೈದಾಡಿ ವಿ.ಸಿ. ಹಣ ನೀಡದಿದ್ದರೆ ನಿನ್ನನ್ನು ಖಲ್ಲಾಸ ಮಾಡಿ ಬಿಡುವುದಾಗಿ ಪ್ರಾಣ ಬೆದರಿಕೆಯನ್ನು ಹೂಡಿದ್ದು ಇರುತ್ತದೆ. ನಂತರ ಆರೋಪೀ ನಂ.4 ಇವರೂ ಸಹ ಅವಾಚ್ಯ ಶಬ್ದಗಳಿಂದ ಬೈದಾಡಿ ಊರಿನಲ್ಲಿ ಬಹಳ ಆಗಿದೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ.

ನಂತರ ಆರೋಪೀ ನಂ.5 ಮತ್ತು 6 ಇವರೂ ಸಹ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಮುಂದುವರೆದು ಊರು ಬಿಟ್ಟು ಹೋದವಳು ಮತ್ತೇಕೆ ಬಂದೆ ಎಂದು ಬೈದಿದ್ದು ಇರುತ್ತದೆ. ನಂತರ ಆರೋಪೀ ನಂ.2 ನನ್ನ ಕಪಾಳಕ್ಕೆ ಹೊಡೆದು ಕೂದಲನ್ನು ಹಿಡಿದು ಜಗ್ಗಾಡಿದ್ದು ಇರುತ್ತದೆ. ಚೀರಾಡುವ ಸಮಯದಲ್ಲಿ ಸದರಿ ಜಗಳವನ್ನು ಚಾಸಾ-4 ರಿಂದ 6 ಬಿಡಿಸಿರುತ್ತಾರೆ. ಸದರಿ ಆರೋಪಿತರು ಚಾಸಾ-4 ರಿಂದ 6 ಜಗಳವನ್ನು ಬಿಡಿಸಿರುವ ಕಾರಣ ಉಳಿದುಕೊಂಡೆ ಇಲ್ಲವಾದಲ್ಲಿ ನಿನ್ನ ಪ್ರಾಣ ತೆಗೆದಿರುತ್ತೇವೆ ಎಂದು ಹೇಳಿದ್ದು ಇರುತ್ತದೆ.

ನಂತರದಲ್ಲಿ 11 ಗಂಟೆ ಸುಮಾರಿಗೆ ಘಟನೆಯ ಕುರಿತು ಒಂದು ಫಿರ್ಯಾದಿಯನ್ನು ನೀಡಿದ್ದು ಇರುತ್ತದೆ. ಈ ಹಂತದಲ್ಲಿ ಸಾಕ್ಷಿದಾರರಿಗೆ

ಕಡತದಲ್ಲಿರುವ ಒಂದು ದಾಖಲೆಯನ್ನು ತೋರಿಸಿದ್ದು, ಅದು ಫಿರ್ಯಾದಿಯಾಗಿದ್ದು, ಅದನ್ನು ನಿ.ಪಿ.3 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.3(ಎ) ಎಂದು ನಿಶಾನೆಗೊಳಿಸಲಾಯಿತು. ಆರೋಪಿತರು ನ್ಯಾಯಾಲಯದ ಮುಂದೆ ಉಪಸ್ಥಿತರಿರುತ್ತಾರೆ.

ಸದರಿ ಜಗಳವು ಬಿ.ಸಿ. ಹಣದ ಹಂಚಿಕೆ ಕುರಿತಾಗಿ ನಡೆದಿರುತ್ತದೆ. ಈ ಹಣವು ಆರೋಪಿ ನಂ.1 ಮತ್ತು ನನ್ನ ನಡುವೆ ಹಂಚಿಕೆಯಾಗಿರುತ್ತದೆ. ಈ ವಿಚಾರವಾಗಿ ಪದೇ ಪದೇ ಬಾಯಿ ಮಾತಿನ ತಕರಾರು ನನ್ನ ಮತ್ತು ಆರೋಪಿತರ ನಡುವೆ ಆಗುತ್ತಿತ್ತು. ಸದರಿ ಆರೋಪಿತರು ಬೈದು ಹಿಂಸೆಯನ್ನು ನೀಡುತ್ತಾ ಬಂದಿರುತ್ತಾರೆ. ಇಷ್ಟನ್ನು ಹೊರತುಪಡಿಸಿ ಬೇರೆ ಮಾಹಿತಿ ಇರುವುದಿಲ್ಲ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಆರೋಪಿತರು ಅಕ್ರಮ ಕೂಟವನ್ನು ರಚಿಸಿಕೊಂಡು ನಮ್ಮ ಮನೆಗೆ ಬಂದಿದ್ದು ಇರುತ್ತದೆ ಎಂದರೆ ಸರಿ. ಆರೋಪಿ ನಂ.3 ಇವರು ನನಗೆ ಅವಾಚ್ಯ ಶಬ್ದಗಳಿಂದ ಬೈದಾಡಿ ಮನೆಯ ಹೊರಗಡೆ ಕರೆದಿದ್ದು ಇರುತ್ತದೆ ಎಂದರೆ ಸರಿ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ**

ನಾನು ಮತ್ತು ಆರೋಪಿತರು ಒಂದೇ ಸಮಾಜಕ್ಕೆ ಸೇರಿದ ವ್ಯಕ್ತಿಗಳು ಎಂದರೆ ಸರಿ. ನಮ್ಮ ತಾಂಡಾದಲ್ಲಿ ನಾನು ಮತ್ತು ಆರೋಪಿತರ ನಡುವೆ ಒಳ್ಳೆಯ ಬಾಂಧವ್ಯ ಇತ್ತು ಎಂದರೆ ಸರಿಯಲ್ಲ. ಇಲ್ಲಿವರೆಗೂ ನಾನು ನಮ್ಮ ಊರಿನವರ ಮೇಲೆ ಎಷ್ಟು ಪ್ರಕರಣದ ದಾಖಲು ಮಾಡಿರುತ್ತೀರಿ ಎಂದರೆ ಸಾಕ್ಷಿದಾರರು ನನ್ನ ವಿರುದ್ಧವೇ ಸುಳ್ಳು ಪ್ರಕರಣಗಳನ್ನು ದಾಖಲು ಮಾಡಿದ್ದು ಇರುತ್ತದೆ ಎಂದು ನುಡಿಯುತ್ತಾರೆ.

ಇದೇ ನ್ಯಾಯಾಲದಲ್ಲಿ ನನ್ನ ಮೇಲೆ 6-7 ಪ್ರಕರಣಗಳು ಇರುತ್ತವೆ. ಒಂದು ಪ್ರಕರಣದಲ್ಲಿ ನಾನು ಸಿ.ಪಿ.ಐ ಇವರಿಗೆ ಹೊಡೆಯಲು ಪ್ರಯತ್ನ ಮಾಡಿದ್ದು ಇರುತ್ತದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ನ್ಯಾಯಾಂಗ ಬಂಧನದಲ್ಲಿ ಇರುವಾಗ ಆರೋಪಿ ನಂ.1 ನನ್ನನ್ನು ಹೊರತರಲು ಪ್ರಯತ್ನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮನೆಗೆ ಜಗಳ ತೆಗೆಯಲು 6 ಜನರು ಬಂದಿರುತ್ತಾರೆ. ಈ ವಿಚಾರವನ್ನು ನಾನು ನಿ.ಪಿ.1 ರಲ್ಲಿ ನಮೂದಿಸಿರುತ್ತೇನೆ.

ಆರೋಪಿತರು ಮನೆಗೆ ಬಂದ ತಕ್ಷಣ ನನ್ನ ಕೈಯನ್ನು ತಿರುವಿದ್ದು ಇರುತ್ತದೆ. ಆ ಸಮಯದಲ್ಲಿ ಆರೋಪಿ ನಂ.1 ನನ್ನ ಬಲಭಾಗಕ್ಕೆ ನಿಂತಿರುತ್ತಾರೆ. ಎಷ್ಟು ಬಿ.ಸಿ. ನಡೆಸುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿದಾರರು 1 ಬಿ.ಸಿ.ಯನ್ನು ನಡೆಸುತ್ತೇನೆ ಎಂದು ಉತ್ತರಿಸುತ್ತಾರೆ. ನಾನು ಊರಿನಲ್ಲಿ ಆಗಾಗ ಬಿ.ಸಿ. ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಮನೆಗೆ ಬಂದಾಗ ಸಮಯ 8.45 ಗಂಟೆ ಆಗಿತ್ತು.

ಸದರಿ ಜಗಳವು ಅರ್ಧ ಗಂಟೆ ಕಾಲ ನಡೆದಿದ್ದು ಇರುತ್ತದೆ. ನಾನು ಠಾಣೆಗೆ ಹೋದಾಗ 10.50 ಆಗಿತ್ತು. ನಾನು ಹೋದ ತಕ್ಷಣ ದೂರನ್ನು ಬೆರಳಚ್ಚುಮಾಡಿಸಿದ್ದು ಇರುತ್ತದೆ. ಸದರಿ ಬೆರಳಚ್ಚನ್ನು ಠಾಣೆಯ ಮುಂದೆ ಇರುವ ಒಂದು ಅಂಗಡಿಯಲ್ಲಿ ಮಾಡಿಸಿದ್ದೆ. ನಾನು ಕಳೆದ 3 ವರ್ಷದಿಂದ ಪ್ರಾಂಶುಪಾಲಳು ಎಂದು ಕಾರ್ಯ ನಿರ್ವಹಿಸುತ್ತಿದ್ದೇನೆ. ಘಟನೆ ನಡೆದಾಗ ನಾನು ಊರಲ್ಲಿ ಸ್ವಂತ ಉದ್ಯೋಗ ಮಾಡುತ್ತಿದ್ದೆ. ಅದರಂತೆ ನಾನು ಎಸ್.ಬಿ.ಐ ಮಿನಿ ಬ್ಯಾಂಕ ಕೆಲಸ ಮಾಡುತ್ತಿದ್ದೆ.

ನನಗೆ ಬ್ಯಾಂಕಿನ ವ್ಯವಹಾರ ಕುರಿತು ಮಾಹಿತಿ ಇರುತ್ತದೆ ಎಂದರೆ ಸಾಕ್ಷಿದಾರರು ಪೂರ್ಣ ಮಾಹಿತಿ ಇರುವುದಿಲ್ಲ ಎಂದು ಹೇಳುತ್ತಾರೆ. ದಿ: 30/07/2023 ರಂದು ಆರೋಪಿತರು ಮನೆಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆರೋಪಿತರು ಚಿಟಿ ಬಿಸಿ ಎರಡು ಹಾಗೂ ಒಂದು ಸವಾಲ ಬಿಸಿಯನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ಆ ಬಿಸಿ ಹಣವನ್ನು ವಾಪಸ್ಸು ನೀಡದೇ ಇರುವ ಕಾರಣ ಒಂದು ಖೊಟ್ಟಿ ಫಿರ್ಯಾದಿಯನ್ನು ನಾನು ಅವರ ವಿರುದ್ದ ನೀಡಿದ್ದು ಇರುತ್ತದೆ ಎಂದರೆ ಸರಿಯಲ್ಲ.

ಬಿ.ಸಿ ಹಣವನ್ನು ವಾಪಸ್ ನೀಡಬಾರದು ಎಂಬ ಉದ್ದೇಶದಿಂದ ನಾನು ಒಂದು ಖೊಟ್ಟಿ ಫಿರ್ಯಾದಿಯನ್ನು ನೀಡಿ ತೊಂದರೆ ಗೊಳಿಸಬೇಕು ಎಂದು ಸಾಕ್ಷಿ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ. ಸುಮಾರು ವರ್ಷಗಳಿಂದ ನಾನು ಕೋರ್ಟಿನಲ್ಲಿ ಅಲೆದಾಡುತ್ತಿದ್ದೇನೆ ಎಂದರೆ ಸರಿ. ಹಣವನ್ನು ನೀಡಬಾರದು ಎಂಬ ದುರುದ್ದೇಶದಿಂದ ನಾನು ಒಂದು ಖೊಟ್ಟಿ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.3 ರಲ್ಲಿ ನಮೂದಿಸಿರುವ ಹಾಗೆ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**

**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**